**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 231/2022

**ಸಾಕ್ಷಿಯನ್ನು ದಿನಾಂಕ 31.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಜ್ರ ಕೆ | ಪಿ.ಡಬ್ಲ್ಯೂ–22 |
| ತಂದೆಯ/ಗಂಡನ ಹೆಸರು | : | ಮಹಮ್ಮದ್ ಪೀರ್ | ಸಿ.ಡಬ್ಲ್ಯೂ–43 |
| ವಯಸ್ಸು | : | 48 | |
| ಉದ್ಯೋಗ | : | ಮಹಿಳಾ ಮುಖ್ಯ ಪೇದೆ,<br>ವಿಜಯನಗರ ಪಿ.ಎಸ್ | |
| ವಾಸ ಸ್ಥಳ | : | ಮೈಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2017 ರಿಂದ 2024 ರವರೆಗೆ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಮಹಿಳಾ ಮುಖ್ಯ ಪೇದೆ ಆಗಿ ಕೆಲಸ ಮಾಡಿರುತ್ತೇನೆ. ದಿನಾಂಕ 5.10.2021 ರಂದು ಚಾಸ 51 ರವರು ನನ್ನನ್ನು ಹಾಗೂ ಚಾಸ 44, 45 ರವರನ್ನು ಕ್ರೈಂ ನಂ.59/2021 ರಲ್ಲಿನ ಆರೋಪಿತರ ಪತ್ತೆಗಾಗಿ ನೇಮಿಸಿದ್ದರು. ಆಗ ಹೆಬ್ಬಾಳ 1 ನೇ ಹಂತದಲ್ಲಿರುವ 2 ನೇ ಆರೋಪಿಯ ಮನೆ ಬಳಿ ಹೋಗಿ ನೋಡಿದಾಗ ಅವರು ಮನೆಯಲ್ಲಿರಲಿಲ್ಲ. ಅಕ್ಕಪಕ್ಕದವರನ್ನು ಕೇಳಿದಾಗ ಅವರು ಗೊತ್ತಿಲ್ಲ ಎಂದು ಹೇಳಿದರು. ನಂತರ ನಾವು ಗಸ್ತು ಮಾಡುತ್ತಿರುವಾಗ ಬಾತ್ಮಿದಾರರಿಂದ ಮಾಹಿತಿ ಬಂದ ಮೇರೆಗೆ ಹೆಬ್ಬಾಳದಲ್ಲಿರುವ ಅಭಿಷೇಕ್ ವೃತ್ತದ ಬಸ್ ನಿಲ್ದಾಣದ ಬಳಿ ಹೋಗಿ

ನೋಡಿದಾಗ ಅಲ್ಲಿ ಒಂದು ಹೆಂಗಸು ಮಗುವನ್ನು ಎತ್ತಿಕೊಂಡು ನಿಂತಿದ್ದರು. ಆಗ ಬಾತ್ಮಿದಾರರ ಮೂಲಕ ಆ ಮಹಿಳೆ ಲಾವಣ್ಯ ಎಂದು ಖಚಿತಪಡಿಸಿಕೊಂಡವು. ನಂತರ ಆ ಮಹಿಳೆಯನ್ನು ವಿಚಾರಿಸಿದಾಗ ತನ್ನ ಹೆಸರು ಲಾವಣ್ಯ ಕೋಂ ಚೇತನ್‌ಕುಮಾರ್ ಎಂದು ತಿಳಿಸಿದರು. ಆಗ ನಾವು ಆ ಮಹಿಳೆಯನ್ನು ವಶಕ್ಕೆ ಪಡೆದು ಠಾಣೆಗೆ ಬಂದು ಅದೇ ದಿನ ತನಿಖಾಧಿಕಾರಿ ಮುಂದೆ ಹಾಜರುಪಡಿಸಿದೆವು. ಆ ಬಗ್ಗೆ ನಾನು ವರದಿ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ವರದಿಯನ್ನು ನಿಪಿ31 ಎಂದು, ಸಹಿಯನ್ನು ನಿಪಿ31ಎ ಎಂದು ಗುರುತಿಸಿದೆ. ನ್ಯಾಯಾಲಯದ ಮುಂದಿರುವ 2ನೇ ಆರೋಪಿ ಆ ದಿನ ನಾವು ವಶಕ್ಕೆ ಪಡೆದ ಮಹಿಳೆ ಇರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್.ಎನ್.ಆರ್ ವಕೀಲರಿಂದಃ</u>**

ಚಾಸ51ರವರು ನಮ್ಮನ್ನು 2ನೇ ಆರೋಪಿ ಪತ್ತೆಗೆ ನೇಮಿಸಿದ್ದರು. 2ನೇ ಆರೋಪಿತಳನ್ನು ನಾವು ವಶಕ್ಕೆ ಪಡೆದಾಗ ಅವರ ಬಳಿಯಿದ್ದ ಮಗುವಿಗೆ 8 ತಿಂಗಳ ವಯಸ್ಸಾಗಿತ್ತು. 2ನೇ ಆರೋಪಿತಳನ್ನು ಮನೆಯಿಂದ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು